ಇದಕ್ಕಿಂತ ಹೆಚ್ಚಿನ ಸ್ಥಾನಮಾನ ದೊರಕುತ್ತಿದ್ದುದು ಅಸಂಭವ. ಆಗೊಂದು ವೇಳೆ ನಿನ್ನ ತಂದೆ ಪ್ರತಿಭಟಿಸಿದ್ದರೆ ಸಂಚು ಮಾಡಿ ಕೊಲ್ಲಲೂ ದುರ್ಯೋಧನ ಹೇಸುತ್ತಿರಲಿಲ್ಲ.'

'ಹೀಗನ್ನುತ್ತೀಯಾ?' ಯುಯುತ್ಸು ಮಾತುಕೇಳಿ ವೃಷಕೇತು ಬೆದರಿಹೋದ.

'ಹೌದು ಮತ್ತೆ. ಐವರು ಪಾಂಡವರನ್ನು ಕೊಂದ ಮೇಲೂ ಮತ್ತೊಬ್ಬ ಪಾಂಡವ ಬದುಕಿ ಉಳಿಯುವುದನ್ನು ದುರ್ಯೋಧನ ಸಹಿಸುವುದಾದರೂ ಹೇಗೆ?'

★★★

ಇಬ್ಬರೂ ಅರಮನೆ ತಲುಪಿದರು. ಅಲ್ಲಿ ಭದ್ರಾವತಿಪುರದ ಮಹಾರಾಜ ಯೌವನಾಶ್ವನನ್ನು ಕಂಡು ವೃಷಕೇತು ಚಕಿತನಾದ.

ಇದಕ್ಕೂ ಮೊದಲು ಅಶ್ವಮೇಧಯಾಗಕ್ಕೆ ಬೇಕಾಗಿದ್ದ ಸರ್ವಲಕ್ಷಣಗಳಿಂದ ಕೂಡಿದ ಕುದುರೆ ಈ ರಾಜನ ಬಳಿಯೇ ಇದ್ದದ್ದು. ಅದನ್ನು ಕೊಡಲು ಅವನು ಸಿದ್ಧನಿರಲಿಲ್ಲ. ಆಗ ಅದನ್ನು ತರಲು ಚಿಕ್ಕಪ್ಪ ಭೀಮಸೇನನೊಂದಿಗೆ ತಾನು ಮತ್ತು ಘಟೋತ್ಕಚನ ಮಗ ಮೇಘವರ್ಣ ಹೋದದ್ದು, ಯುದ್ಧದಲ್ಲಿ ಗೆದ್ದು ಕುದುರೆಯೊಂದಿಗೆ ಹಸ್ತಿನಾಪುರಕ್ಕೆ ಹಿಂದಿರುಗಿದ್ದೂ ಆಗಿತ್ತು. ಆದರೆ, ಯುದ್ಧದಲ್ಲಿ ಸೋತ ಯೌವನಾಶ್ವ ಈಗೇಕೆ ಇಲ್ಲಿಗೆ ಬಂದ? ಇಲ್ಲೇನು ಕೆಲಸ ಅವನಿಗೆ? ನೋಡಿದರೆ ಯುಧಿಷ್ಠಿರ ಮಹಾರಾಜನೊಂದಿಗೆ ಕುಶಲ ಸಂಭಾಷಣೆ ನಡೆಸಿದ ಹಾಗಿದೆ. ತನ್ನತ್ತ ನೋಡುತ್ತ ಇಬ್ಬರೂ ಕಣ್ಣರಳಿಸಿದ್ದಾರೆ. ಆ ನೋಟದಲ್ಲಿ ಕಾಣುತ್ತಿರುವುದು ಅಭಿಮಾನವೋ ಮೆಚ್ಚುಗೆಯೋ!

ವೃಷಕೇತು ತನ್ನಲ್ಲಿ ತಾನು ವಿಸ್ಮಯಗೊಳ್ಳುತ್ತಿದ್ದಂತೆ ಯುಧಿಷ್ಠಿರ ಮಹಾರಾಜ ಹತ್ತಿರಕ್ಕೆ ಕರೆದ. ಬಳಿ ಹೋಗಿ ನಿಲ್ಲುತ್ತಿದ್ದಂತೆ ಪ್ರೀತಿಯಿಂದ ಬೆನ್ನು ತಟ್ಟಿದ. 'ಈತ ನಮ್ಮ ಮಗ ವೃಷಕೇತು' ಎಂದು ಯೌವನಾಶ್ವನಿಗೆ ಪರಿಚಯಿಸಿದ. ಮತ್ತೆ ಮುಂದುವರಿದು ವೃಷಕೇತು ಕಡೆ ತಿರುಗಿ, 'ಯಾಗದ ಕುದುರೆಗಾಗಿ ನಡೆದ ಯುದ್ಧದಲ್ಲಿ ನಿನ್ನ ಪರಾಕ್ರಮ ಕಂಡು ಮಹಾರಾಜ ಯೌವನಾಶ್ವ ಬೆರಗಾಗಿದ್ದಾನೆ. ಅವನಿಗೆ ಒಬ್ಬಳೇ ಮಗಳು. ಈಗ ನಿನ್ನನ್ನೇ ಅಳಿಯನನ್ನಾಗಿ ಮಾಡಿಕೊಳ್ಳುವ ಹಂಬಲದಿಂದ ಇಲ್ಲಿಗೆ ಬಂದಿದ್ದಾನೆ. ನಾವೆಲ್ಲ ಈ ಸಂಬಂಧಕ್ಕೆ ಒಪ್ಪಿಯಾಗಿದೆ. ಇನ್ನು ನೀನು...' ಎಂದು ಹಗುರವಾಗಿ ಉತ್ತೇಜಿಸುವ ನಗೆ ನಕ್ಕ.

ಒಮ್ಮೆಲೇ ತನ್ನ ಮದುವೆಯ ಪ್ರಸ್ತಾಪ ಕೇಳಿ ವೃಷಕೇತು ತುಸು ಲಜ್ಜಿತನಾದ. ತಕ್ಷಣ ಏನು ಹೇಳುವುದೋ ಹೊಳೆಯದೆ ಪಕ್ಕದಲ್ಲಿದ್ದ ಯುಯುತ್ಸು ಕಡೆ ನೋಡಿದ. 'ಒಪ್ಪಿಕೋ' ಎಂಬಂತೆ ಸನ್ನೆ ಮಾಡಿದ ಯುಯುತ್ಸು ಇನ್ನಷ್ಟು ಹತ್ತಿರ ಸರಿದು ಆಪ್ತವಾಗಿ ಪಿಸುಗುಟ್ಟಿದ: 'ನೀನೀಗ ಕ್ಷತ್ರಿಯ ಎಂದು ನಿನಗೀಗ ಮನವರಿಕೆ ಆಯಿತು ತಾನೇ, ನಿನ್ನ ಕ್ಷತ್ರಿಯತ್ವವನ್ನು ಮನ್ನಿಸುವವರು ಸಿಕ್ಕರು ತಾನೆ? ನಿನ್ನ ಹೆಂಡತಿಯಾಗುವವಳು ಕ್ಷತ್ರಿಯ ರಾಜಕನ್ಯೆ. ಇನ್ನು ನಿನಗೆ ಯಾವ ದುಗುಡವೂ ಇರಬೇಕಾಗಿಲ್ಲ. ನಿನ್ನ ಸಂತತಿ ಕ್ಷತ್ರಿಯರಾಗೇ ಮುಂದುವರಿಯುತ್ತದೆ. ಇನ್ನೇನುಬೇಕು ನಿನಗೆ?'

ವೃಷಕೇತು ಸಂತಸದಿಂದ ಒಪ್ಪಿದೆ ಎಂಬಂತೆ ತಲೆದೂಗಿದ.

## ರಾಮಚಂದ್ರ ಭಾವೆ

ಶಿವಮೊಗ್ಗ ಜಿಲ್ಲೆಯ ಸೊರಬ ರಾಮಚಂದ್ರ ಭಾವೆ ಅವರ ಊರು. ಅಂಚೆ ಇಲಾಖೆಯಲ್ಲಿ ಗದಗದಲ್ಲಿ 35 ವರ್ಷ ಸೇವೆ ಸಲ್ಲಿಸಿ, ಪ್ರಸ್ತುತ ಮಹಾರಾಷ್ಟ್ರದ ರತ್ನಾಗಿರಿಯಲ್ಲಿ ವಾಸವಾಗಿದ್ದಾರೆ. ಇಲ್ಲಿಯವರೆಗೆ ಅವರ 20 ಕಾದಂಬರಿಗಳು, ಐದು ಕಥಾಸಂಗ್ರಹಗಳು ಪ್ರಕಟವಾಗಿವೆ. 'ಅಂಧಪರ್ವ' ಕಾದಂಬರಿ 'ಸುಧಾ' ವಾರಪತ್ರಿಕೆಯಲ್ಲಿ ಧಾರಾವಾಹಿಯಾಗಿ ಪ್ರಕಟವಾಗಿತ್ತು. ಭಾವೆ, ನಾಟಕಗಳನ್ನೂ ಬರೆದಿದ್ದಾರೆ. ಸುಮಾರು 250 ಕತೆಗಳು ಪತ್ರಿಕೆಗಳಲ್ಲಿ ಪ್ರಕಟವಾಗಿವೆ.